**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

ಸಂಖ್ಯೆ :ಸಂವ್ಯಶಾಇ 09 ರಾಶಾಪ್ರ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:14.07.2020.

**ಅಧಿಸೂಚನೆ**

The Karnataka Official Language Act, 1963 (Karnataka Act 26 of 1963)ಇದರ ಅಧಿಕೃತ ಕನ್ನಡ ಭಾಷಾಂತರವನ್ನು the Karnataka Official Language Act, 1963 ರ ಪ್ರಕರಣ 5Aರ ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರದಲ್ಲಿ ಪ್ರ ಕಟಿಸಲು ಆದೇಶಿಸಲಾಗಿದೆ.

# ಕರ್ನಾಟಕ ರಾಜಭಾಷಾ ಅಧಿನಿಯಮ, 1963

## ಪ್ರಕರಣಗಳ ಅನುಕ್ರಮಣಿಕೆ

**ಉದ್ದೇಶಗಳು ಮತ್ತು ಕಾರಣಗಳು**

**ಪ್ರಕರಣಗಳು**

1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ

2. ಕನ್ನಡವು ರಾಜ್ಯದ ರಾಜಭಾಷೆಯಾಗಿರುವುದು.

3. ಸರ್ಕಾರವು ಅನ್ಯಥಾ ನಿರ್ದೇಶಿಸುವವರೆಗೂ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲೀಷ್ ಅನ್ನು ಬಳಸುವುದು ಮುಂದುವರೆಸುವುದು.

4. ಕನ್ನಡವನ್ನು ಯಾವ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕೆಂಬುದನ್ನು ಅಧಿಸೂಚಿಸಲು ಸರ್ಕಾರದ ಅಧಿಕಾರ.

5. ವಿಧಾನಮಂಡಲ ಇತ್ಯಾದಿಗಳಲ್ಲಿ ಬಳಸಬೇಕಾದ ಭಾಷೆ.

5ಎ. ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರ.

6. 4ನೇ ಪ್ರಕರಣದ ಅಢಿಯಲ್ಲಿ ಹೊರಡಿಸಲಾದ ಅಧಿಸೂಚನೆಯನ್ನು ವಿಧಾನಮಂಡಲದ ಮುಂದೆ ಮಂಡಿಸುವುದು.

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1963ರ ಅಧಿನಿಯಮ 26.-** 1958ರಲ್ಲಿ ರಾಜ್ಯ ಸರ್ಕಾರವು ರಾಜ್ಯದಲ್ಲಿ ರಾಜಭಾಷೆಯಾಗಿ ಕನ್ನಡವನ್ನು ಅಳವಡಿಸಿಕೊಳ್ಳುವ ಸಂಬಂಧದಲ್ಲಿ ಶಿಫಾರಸ್ಸುಗಳನ್ನು ಮಾಡಲು ಸಮಿತಿಯೊಂದನ್ನು ನೇಮಿಸಿತು. ಸಮಿತಿಯ ಶೀಫಾರಸ್ಸುಗಳನ್ನು ಪರಿಗಣಿಸಿದ ತರುವಾಯ, ಕನ್ನಡವನ್ನು ರಾಜ್ಯದ ರಾಜಭಾಷೆಯಾಗಿ ಮಾಡುವ ಉದ್ದೇಶವನ್ನು ಅನುಷ್ಠಾನಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಯಿತು. ಈ ನೀತಿಯ ಮುಂದುವರಿಕೆಯಲ್ಲಿ, ಈಗ ರಾಜ್ಯದಲ್ಲಿ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಭಾಷೆಯನ್ನಾಗಿ ಕನ್ನಡವನ್ನು ಅಳವಡಿಸಿಕೊಳ್ಳುವುದಕ್ಕಾಗಿ ಉಪಬಂಧ ಕಲ್ಪಿಸಲು ಸಂವಿಧಾನದ 345ನೇ ಅನುಚ್ಛೇದದ ಅನುಸರಣೆಯಲ್ಲಿ ಶಾಸನವನ್ನು ಅಧಿನಿಯಮಿಸಲು ಪ್ರಸ್ತಾವಿಸಲಾಗಿದೆ.

210ನೇ ಅನುಚ್ಛೇದದ (2)ನೇ ಖಂಡದ ಅಡಿಯಲ್ಲಿ, ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿದ ಹೊರತು, ಸಂವಿಧಾನದ ಪ್ರಾರಂಭದಿಂದ ಹದಿನೈದು ವರ್ಷಗಳ ಮುಕ್ತಾಯದ ತರುವಾಯ, ಎಂದರೆ 26ನೇ ಜನವರಿ 1965ರ ತರುವಾಯ ರಾಜ್ಯದ ವಿಧಾನಮಂಡಲದ ವ್ಯವಹಾರ ನಿರ್ವಹಣೆಗಾಗಿ ಇಂಗ್ಲಿಷ್ ಭಾಷೆಯನ್ನು ಬಳಸತಕ್ಕದ್ದಲ್ಲ. ರಾಜ್ಯದ ವಿಧಾನಮಂಡಲದಲ್ಲಿ ವ್ಯವಹಾರ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಯಲ್ಲಿ ಇಂಗ್ಲಿಷ್ ಭಾಷೆಯ ಬಳಕೆಯನ್ನು ಮುಂದುವರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

(ಕರ್ನಾಟಕ ರಾಜ್ಯ ಪತ್ರದಲ್ಲಿ (ವಿಶೇಷ) ಭಾಗ IV-2A, ದಿನಾಂಕ: 27ನೇ ಆಗಸ್ಟ್ 1963ರಂದು 3ನೇ ಪುಟದಲ್ಲಿ ಸಂಖ್ಯೆ 103 ಎಂದು ಪ್ರಕಟಿಸಲಾಗಿದೆ.)

### II

**1974ರ ತಿದ್ದುಪಡಿ ಅಧಿನಿಯಮ 27.-** ಸರ್ಕಾರವು, ಭಾಷೆಗಳ ನಿರ್ದೇಶನಾಲಯವನ್ನು ಸೃಷಿಸುವುದರ ಮೂಲಕ ಭಾಷಾಂತರ ಇಲಾಖೆಯನ್ನು ಇತ್ತೀಚೆಗೆ ಪುನಾರಚಿಸಿದೆ ಮತ್ತು ಭಾಷೆಗಳ ನಿರ್ದೇಶನಾಲಯ ಮಾಡಿದ ಅಧಿನಿಯಮಗಳು ಮತ್ತು ಕೇಂದ್ರ

ಅಧಿನಿಯಮಗಳ ಭಾಷಾಂತರವನ್ನು ಪರಿಶೀಲಿಸಲು ರಾಜಭಾಷಾ (ವಿಧಾಯಿ) ತಜ್ಞರ ಸಮಿತಿ ಎಂದು ಕರೆಯಲಾಗುವ ತಜ್ಞರ ಸಮತಿಯನ್ನು ಕೂಡ ರಚಿಸಿದೆ. ಸಮಿತಿಯು ಪರಿಶೀಲಿಸಿದ ತರುವಾಯ ಕನ್ನಡ ಭಾಷಾಂತರಗಳನ್ನು ಪ್ರಕಟಿಸಲಾಗುವುದು.

2. ಪ್ರಕಟಿಸಲಾದ ಅಧಿನಿಯಮಗಳು ಮತ್ತು ನಿಯಮಗಳ ಕನ್ನಡ ಆವೃತ್ತಿಗಳು ಕಾನೂನಿನ ಪ್ರಾಧಿಕೃತ ಹೊಂದಿಲ್ಲದಿರುವುದರಿಂದ ರಾಜ್ಯಪಾಲರ ಪ್ರಾಧಿಕಾರದ ಅಡಿಯಲ್ಲಿ ಪ್ರಕಟಿಸಲಾದ ಕನ್ನಡ ಭಾಷೆಯ ಯಾವುದೇ ಕೇಂದ್ರ ಅಥವಾ ರಾಜ್ಯ ಅಧಿನಿಯಮದ ಅಥವಾ ರಾಷ್ಟ್ರಪತಿಗಳು ಅಥವಾ ರಾಜ್ಯಪಾಲರ ಮೂಲಕ ಪ್ರಖ್ಯಾಪಿಸಲ್ಪಟಿರುವ ಯಾವುದೇ ಅಧ್ಯಾದೇಶ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶದ ಭಾಷಾಂತರವನ್ನು ಕನ್ನಡ ಭಾಷೆಯಲ್ಲಿನ ಅದರ ಅಧಿಕೃತ ಭಾಷಾಂತರವೆಂದು ಭಾವಿಸತಕ್ಕದ್ದೆಂದು ರಾಜಭಾಷಾ ಅಧಿನಿಯಮದಲ್ಲಿ ಘೋಷಿಸುವ ಉಪಬಂಧವನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರದಲ್ಲಿ (ವಿಶೇಷ) ಭಾಗ IV-2ಎ, ದಿನಾಂಕ: 17ನೇ ಜನವರಿ 1974ರಂದು 3ನೇ ಪುಟದಲ್ಲಿ ಸಂಖ್ಯೆ 82 ಎಂದು ಪ್ರಕಟಿಸಲಾಗಿದೆ.)

## III

**1982ರ ತಿದ್ದುಪಡಿ ಅಧಿನಿಯಮ 6.-** ಕನ್ನಡವನ್ನು ರಾಜ್ಯದ ರಾಜಭಾಷೆಯೆಂದು ಘೋಷಿಸಲಾಗಿದ್ದು, ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 26) ಉಪಬಂಧಗಳಿಗನುಸಾರವಾಗಿ ರಾಜ್ಯದಲ್ಲಿ ಆಡಳಿತ ಎಲ್ಲ ಹಂತಗಳಲ್ಲಿನ ಎಲ್ಲ ಪತ್ರ ವ್ಯವಹಾರಗಳಲ್ಲಿ ಬಳಸಲಾಗುತ್ತಿದೆ.

ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಗುವ ವಿಧೇಯಕಗಳ ಪ್ರಾರೂಪಣೆಯಲ್ಲಿ ಮತ್ತು ರಾಜ್ಯಪಾಲರ ಮೂಲಕ ಪ್ರಖ್ಯಾಪಿಸಲ್ಪಡುವ ಅಧ್ಯಾದೇಶದಲ್ಲಿ ಕೂಡಾ ಕನ್ನಡ ಭಾಷೆಯ ಬಳಕೆಯ ಅನುಕೂಲವಾವುದೆಂದು ತೀವ್ರವಾಗಿ ಭಾವಿಸಲಾಗಿದೆ. ಸಂವಿಧಾನದ 348 (3) ನೇ ಅನುಚ್ಛೇದದಲ್ಲಿ ಹೇಳಲಾದಂತೆ ಸೂಕ್ತ ಶಾಸನಾತ್ಮಕ ಉಪಬಂಧವನ್ನು ಮಾಡುವುದರಿಂದ ಹೊರತಾಗಿ ಹಾಗೆ ಮಾಡಲು ಕಾನೂನಾತ್ಮಕ ಅನುಮತಿಯಿರುವುದಿಲ್ಲ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದಲ್ಲಿ (ವಿಶೇಷ) ಭಾಗ-IV-2ಎ ದಿನಾಂಕ 11ನೇ ಫೆಬ್ರುವರಿ 1982ರಂದು ಪುಟ 3ರಲ್ಲಿ 403 ಎಂದು ಪ್ರಕಟಿಸಲಾಗಿದೆ.)

* * *

**2020ರ ತಿದ್ದುಪಡಿ ಅಧಿನಿಯಮ 14.-** ಕರ್ನಾಟಕ ರಾಜಭಾಷಾ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 26) 5ಎ ಪ್ರಕರಣವು ಪ್ರತಿಯೊಂದು ಆದೇಶ, ನಿಯಮಗಳು, ವಿನಿಯಮಗಳು ಅಥವಾ ಉಪವಿಧಿಗಳ ಕನ್ನಡ ಭಾಷಾಂತರದ ಪ್ರಕಟಣೆಗೆ ಮುನ್ನ ರಾಜ್ಯಪಾಲರ ಅನುಮೋದನೆಯನ್ನು ಅಗತ್ಯಪಡಿಸುತ್ತದೆ. ಇದು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಪ್ರಕ್ರಿಯೆಯನ್ನು ಸರಳಗೊಳಿಸಲು ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಪ್ರತಿಯೊಂದು ಆದೇಶ, ನಿಯಮಗಳು, ವಿನಿಯಮಗಳು ಅಥವಾ ಉಪವಿಧಿಗಳ ಕನ್ನಡ ಭಾಷಾಂತರವನ್ನು ದೃಡೀಕರಿಸಲು ರಾಜ್ಯಪಾಲರ ಬದಲಿಗೆ ರಾಜ್ಯಸರ್ಕಾರಕ್ಕೆ ಅಧಿಕಾರವನ್ನು ನೀಡುವುದಕ್ಕೆ ಸದರಿ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದಲ್ಲಿ (ವಿಶೇಷ) ಭಾಗ-IVರಲ್ಲಿ ದಿನಾಂಕ 28ನೇ ಏಪ್ರಿಲ್ 2020ರಂದು ಪುಟ 155ರಲ್ಲಿ ಪ್ರಕಟಿಸಲಾಗಿದೆ.)

******

**1963 ರ [1][ಕರ್ನಾಟಕ ಅಧಿನಿಯಮ][1] 26**

(1963ರ ಅಕ್ಟೋಬರ್ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲಾಗಿದೆ.)

## [1][ಕರ್ನಾಟಕ][1] ರಾಜಭಾಷಾ ಅಧಿನಿಯಮ, 1963

(1963ನೇ ಅಕ್ಟೋಬರ್ 5ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ.)

(1974ರ ಅಧಿನಿಯಮ 27, 1982ರ ಅಧಿನಿಯಮ 6 ಮತ್ತು 2020ರ ತಿದ್ದುಪಡಿ ಅಧಿನಿಯಮ 14ರ ಮೂಲಕ ತಿದ್ದುಪಡಿಯಾದಂತೆ)

ರಾಜ್ಯದ ಸರ್ಕಾರೀ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ಭಾಷೆಯೆಂದು ಕನ್ನಡವನ್ನು ಅಂಗೀಕರಿಸಲು ಮತ್ತು ರಾಜ್ಯದ ವಿಧಾನಮಂಡಲದ ವ್ಯವಹಾರದ ನಿರ್ವಹಣೆಗಾಗಿ ಇಂಗ್ಲೀಷಿನ ಉಪಯೋಗವನ್ನು ಮುಂದುವರಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಸಂವಿಧಾನವು ಪ್ರಾರಂಭವಾದಂದಿನಿಂದ ಹದಿನೈದು ವರ್ಷಗಳ ಅವಧಿಯು ಗತಿಸಿದ ತರುವಾಯ, ಕರ್ನಾಟಕ ರಾಜ್ಯದ ಸರ್ಕಾರೀ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ಭಾಷೆಯೆಂದು ಕನ್ನಡವನ್ನು ಅಂಗೀಕರಿಸುವುದಕ್ಕಾಗಿ ಮತ್ತು ರಾಜ್ಯದ ವಿಧಾನಮಂಡಲದ ವ್ಯವಹಾರಗಳ ನಿರ್ವಹಣೆಗಾಗಿ ಇಂಗ್ಲೀಷಿನ ಉಪಯೋಗವನ್ನು ಮುಂದುವರಿಸುವುದಕ್ಕಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಹದಿನಾಲ್ಕನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ರಾಜಭಾಷಾ ಅಧಿನಿಯಮ, 1963 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಕನ್ನಡವು ರಾಜ್ಯದ ರಾಜಭಾಷೆಯಾಗಿರುವುದು.-** ಕನ್ನಡವು [1][ಕರ್ನಾಟಕ ರಾಜ್ಯ][1]ದ ರಾಜಭಾಷೆಯಾಗಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**3. ಸರ್ಕಾರವು ಅನ್ಯಥಾ ನಿರ್ದೇಶಿಸುವವರೆಗೂ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲಿಷ್ ಅನ್ನು ಬಳಸುವುದು ಮುಂದುವರೆಯುವುದು.-** 2ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಸಂವಿಧಾನದ 346 ಮತ್ತು 347ನೇ ಅನುಚ್ಛೇದಗಳ ಉಪಬಂಧಗಳಿಗೆ ಬಾಧಕವಾಗದಂತೆ, 4ನೇ ಪ್ರಕರಣದ ಅಡಿಯಲ್ಲಿ, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸರ್ಕಾರಿ ಉದ್ದೇಶದ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸುವವರೆಗೆ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಯಾವುದಕ್ಕಾಗಿ ಬಳಸಲಾಗುತ್ತಿತ್ತೋ ಹಾಗೆಯೇ ಎಲ್ಲಾ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲಿಷ್ ಭಾಷೆಯ ಬಳಕೆಯು ಮುಂದುವರೆಯತಕ್ಕದ್ದು.

**4. ಕನ್ನಡವನ್ನು ಯಾವ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕೆಂಬುದನ್ನು ಅಧಿಸೂಚಿಸಲು ಸರ್ಕಾರದ ಅಧಿಕಾರ.-** ರಾಜ್ಯ ಸರ್ಕಾರವು ಕಾಲಕಾಲಕ್ಕೆ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿ ಅಂಥ ಸರ್ಕಾರಿ ಉದ್ದೇಶಗಳಿಗಾಗಿ ಮತ್ತು ಅಂಥ ಪ್ರದೇಶಗಳ ಸಂಬಂಧದಲ್ಲಿ ಕನ್ನಡವನ್ನು ಬಳಸತಕ್ಕದ್ದೆಂದು ನಿರ್ದೇಶಿಸಬಹುದು.

**5. [1][ವಿಧಾನಮಂಡಲ ಇತ್ಯಾದಿಗಳಲ್ಲಿ ಬಳಸಬೇಕಾದ ಭಾಷೆ][1].- [2][(1)][2]** ಸಂವಿಧಾನದ ಪ್ರಾರಂಭದಿಂದ ಹದಿನೈದು ವರ್ಷಗಳ ಅವಧಿಯ ಮುಕ್ತಾಯವು ಏನೇ ಒಳಗೊಂಡಿದ್ದರೂ, 1965ರ ಜನವರಿ ಇಪ್ಪತ್ತಾರನೇ ದಿನದಿಂದ ರಾಜ್ಯ ವಿಧಾನಮಂಡಲದ ವ್ಯವಹಾರ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಷ್ ಭಾಷೆಯನ್ನು ಬಳಸುವುದು ಮುಂದುವರೆಯತಕ್ಕದ್ದು.

1. 1982ರ ಅಧಿನಿಯಮ 6ರ ಮೂಲಕ 9.3.1982ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1982ರ ಅಧಿನಿಯಮ 6ರ ಮೂಲಕ 9.3.1982ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

[1][(2) ಕನ್ನಡ ಭಾಷೆಯನ್ನು,-

(ಎ) ಕರ್ನಾಟಕ ವಿಧಾನಮಂಡಲದ ಮೂಲಕ ಮಂಡಿಸಬೇಕಾಗಿರುವ ಯಾವುದೇ ವಿಧೇಯಕದಲ್ಲಿ ಅಥವಾ ಅದಕ್ಕೆ ಮಾಡಬೇಕಾಗಿರುವ ತಿದ್ದುಪಡಿಗಳಲ್ಲಿ ಅಥವಾ ಅಂಗೀಕರಿಸಲಾಗುವ ಯಾವುದೇ ಅಧಿನಿಯಮದಲ್ಲಿ; ಅಥವಾ

(ಬಿ) ಕರ್ನಾಟಕ ರಾಜ್ಯದ ರಾಜ್ಯಪಾಲರ ಮೂಲಕ ಪ್ರಖ್ಯಾಪಿಸಲ್ಪಡುವ ಯಾವುದೇ ಅಧ್ಯಾದೇಶದಲ್ಲಿ; ಅಥವಾ

(ಸಿ) ಸಂವಿಧಾನದ ಅಡಿಯಲ್ಲಿ ರಾಜ್ಯ ಸರ್ಕಾರದ ಮೂಲಕ ಅಥವಾ ಸಂಸತ್ತು ಅಥವಾ ಕರ್ನಾಟಕ ರಾಜ್ಯ ವಿಧಾನಮಂಡಲದ ಮೂಲಕ ಮಾಡಲಾದ ಯಾವುದೇ ಕಾನೂನಿನ ಅಡಿಯಲ್ಲಿ ಹೊರಡಿಸಲ್ಪಡುವ ಯಾವುದೇ ಆದೇಶ, ನಿಯಮ, ವಿನಿಯಮ ಅಥವಾ ಉಪವಿಧಿಯಲ್ಲಿ,

- ಕೂಡಾ ಬಳಸಬಹುದು.]1

1. 1982ರ ಅಧಿನಿಯಮ 6ರ ಮೂಲಕ 9.3.1982ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[2][[1][**5ಎ. ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳು, ನಿಯಮಗಳು, ವಿನಿಯಮಗಳು ಇತ್ಯಾದಿಗಳ., ಅಧಿಕೃತ ಕನ್ನಡ ಭಾಷಾಂತರ.-** (1) ರಾಜ್ಯಪಾಲರ ಆದೇಶದ ಮೇರೆಗೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಯಾವುದೇ ಕೇಂದ್ರ

ಅಧಿನಿಯಮದ ಅಥವಾ ಸಂವಿಧಾನದ ಏಳನೆಯ ಅನುಸೂಚಿಯ IIIನೆಯ ಪಟ್ಟಿಯಲ್ಲಿ ಸೂಚಿಸಿದ ವಿಷಯಗಳ ಪೈಕಿ ಯಾವುದೇ ವಿಷಯದ ಸಂಬಂಧದಲ್ಲಿ ರಾಷ್ಟ್ರಪತಿಯಿಂದ ಪ್ರಖ್ಯಾಪಿತವಾದ ಯಾವುದೇ ಅಧ್ಯಾದೇಶದ ಅಥವಾ ಯಾವುದೇ ರಾಜ್ಯ ಅಧಿನಿಯಮದ ಅಥವಾ ರಾಜ್ಯಪಾಲರು ಮಾಡಿದ ಯಾವುದೇ ಅಧ್ಯಾದೇಶದ ಅಥವಾ ನಿಯಮಗಳ ಕನ್ನಡ ಭಾಷಾಂತರವನ್ನು ಅವುಗಳ ಅಧಿಕೃತ ಕನ್ನಡ ಪಠ್ಯವೆಂದು ಭಾವಿಸತಕ್ಕದ್ದು.

(2) ರಾಜ್ಯ ಸರ್ಕಾರದ ಆದೇಶದ ಮೇರೆಗೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಸಂವಿಧಾನದ ಮೇರೆಗೆ ಅಥವಾ ಯಾವುದೇ ಕೇಂದ್ರಾಧಿನಿಯಮದ ಅಥವಾ ಯಾವುದೇ ರಾಜ್ಯ ಅಧಿನಿಯಮದ ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ನಿಯಮಗಳು, ವಿನಿಯಮಗಳು, ಉಪವಿಧಿಗಳ, ಸ್ಕೀಮು, ಆದೇಶ ಇತ್ಯಾದಿ., ಇವುಗಳ ಕನ್ನಡ ಭಾಷಾಂತರವನ್ನು ಅವುಗಳ ಅಧಿಕೃತ ಕನ್ನಡ ಪಠ್ಯವೆಂದು ಭಾವಿಸತಕ್ಕದ್ದು.][1][2]

1. 1974ರ ಅಧಿನಿಯಮ 27ರ ಮೂಲಕ 1.2.1975ರಿಂದ ಜಾರಿಗೆ ಬರುವಂತೆ 5ಎ ಪ್ರಕರಣವನ್ನು ಸೇರಿಸಲಾಗಿದೆ.

2. 2020ರ ಅಧಿನಿಯಮ 14ರ ಮೂಲಕ 28.4.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. 4ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಗಳನ್ನು ವಿಧಾನಮಂಡಲದ ಮುಂದೆ ಮಂಡಿಸುವುದು.-** 4ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡನ್ನು ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ಅಧಿಸೂಚನೆಯ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

* * *

**ಅಧಿಸೂಚನೆ**

**ಎಸ್.ಒ. 2731.-** ಕರ್ನಾಟಕ ರಾಜಭಾಷಾ (ತಿದ್ದುಪಡಿ) ಅಧಿನಿಯಮ, 1974ರ (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 27) 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಉಪ ಪ್ರಕರಣದ ಉದ್ದೇಶಗಳಿಗಾಗಿ 1975ನೇ ಫೆಬ್ರುವರಿ 1ನೇ ದಿನವನ್ನು ಕರ್ನಾಟಕ ಸರ್ಕಾರವು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಸಹಿ/-**

**(ಎಂ. ಶಂಕರನಾರಾಯಣನ್)**
ಸರ್ಕಾರದ ಅಪರ ಕಾರ್ಯದರ್ಶಿ
ಸಾಮಾನ್ಯ ಆಡಳಿತ ಇಲಾಖೆ

The above translation of the Karnataka Official Language Act, 1963 (Karnataka Act 26 of 1963) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**VAJUBHAI VALA**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಇಲಾಖೆ